# GATWU – Avery Denison Branch

*ನಾವು ಬೆವರನು ಸುರಿಸಿ ದುಡಿಯುವಜನ. . . .ನಮ್ಮ ಬೆವರಿನ ಪಾಲನು ಕೇಳುವೆವು. .*

ಆತ್ಮೀಯ ಸಂಗಾತಿಗಳೇ, ನೀವೇ ನಿರ್ಧರಿಸಿ. .... ..

ಕಂಪನಿಯು ಸತತವಾಗಿ ಲಾಭ ಗಳಿಸುತ್ತಿರುವ ಸಂದರ್ಭದಲ್ಲಿ, ಕಾನೂನುಬದ್ಧವಾಗಿ ಆಡಳಿತವರ್ಗಕ್ಕೆ 20% ಬೋನಸ್‌ಗಾಗಿ ಬೇಡಿಕೆ ಇಟ್ಟರೆ, ಅದುಸ್ವಾರ್ಥವೇ? ಸುಳ್ಳು ಭರವಸೆಯೇ?

ಎಲ್ಲಗುತ್ತಿಗೆ ಕಾರ್ಮಿಕರನ್ನೂ ಖಾಯಂ ಗೊಳಿಸಿ ಎನ್ನುವುದು ಸ್ವಾರ್ಥವೇ ? ಸುಳ್ಳು ಭರವಸೆಯೇ?

ನಮ್ಮ ವೇತನದಲ್ಲಿ ಡಿ.ಎ ಇರಲೇಬೇಕೆಂಬುದು ಸ್ವಾರ್ಥವೇ ? ಸುಳ್ಳು ಭರವಸೆಯೇ ?

ಆಡಳಿತವರ್ಗ ಸಿಸಿ ಕ್ಯಾಮೆರಾ ಹಾಕಿರುವುದರಲ್ಲಿ, ಬಯೋಮೆಟ್ರಿಕ್ ಸಿಸ್ಟಮ್ ಅಳವಡಿಸಿರುವುದರಲ್ಲಿ, ಕಾರ್ಮಿಕರ ಓಟಿ ನಿಲ್ಲಿಸಿರುವುದರಲ್ಲಿ ಯಾರ ಕೈವಾಡವಿದೆ ?

ಆಡಳಿತವರ್ಗದ ಕೈಗೊಂಬೆಯಾಗಿ ಕಾರ್ಮಿಕರ 'ಐಕ್ಯತೆಯನ್ನು ಒಡೆಯುತ್ತಿರುವವರು ಯಾರು ?

ಮಾಡಿಕೊಂಡ ದ್ವಿಪಕ್ಷೀಯ ಒಪ್ಪಂದದಲ್ಲಿಕಾರ್ಮಿಕರ ಹಿತಾಸಕ್ತಿಯನ್ನುಅಡವಿಟ್ಟು, ಈ ಮೇಲಿನ ಎಲ್ಲ ಅನ್ಯಾಯಗಳಾಗಲು ಕಾರಣಕರ್ತರ್‍ಯಾರು?

ಕಾರ್ಮಿಕರಐಕ್ಯತೆಯ ಮಂತ್ರವನ್ನು ಈಗ ಜಪಿಸುತ್ತಿರುವವರು ಈ ಹಿಂದೆಕಾಂಟ್ರಾಕ್ಟ್‌ಲೇಬರ್, ವೈಟ್‌ಕಾಲರ್‌ಕಾರ್ಮಿಕರು ಹೌಸ್‌ಕೀಪಿಂಗ್‌ಕಾರ್ಮಿಕರನ್ನು ಏಕೆ ಸಂಘಟಿಸಲಿಲ್ಲ?

ಆಡಳಿತವರ್ಗವು ಓಟ್‌ಸೋರ್ಸಿಂಗ್ ಮಾಡಿಸುತ್ತ, ಕಾರ್ಮಿಕರಿಗೆಅನ್ಯಾಯವಾಗುತ್ತಿದ್ದರೂ, ಚಕಾರವೆತ್ತದೆ, ಆಡಳಿತವರ್ಗದ ಕೈಗೊಂಬೆಯಾಗಿದ್ದವರುಯಾರು?

ಯೂನಿಯನ್‌ಕಾರ್ಮಿಕರಿಗೆಯಾವುದೇಕಾರ್ಮಿಕ ಕಾನೂನುಗಳು ಮತ್ತು ಹಕ್ಕುಗಳ ಬಗ್ಗೆ ತಿಳಿಸದೇ ಅವರನ್ನುಕತ್ತಲಲ್ಲಿಟ್ಟು, ಆಡಳಿತವರ್ಗಕ್ಕೆ ಉಪಯೋಗ ಮಾಡಿಕೊಟ್ಟವರುಯಾರು?

ಕಾರ್ಮಿರನ್ನುಒಡೆಯುವುದುಮತ್ತುಆಡಳಿತವರ್ಗದೊಂದಿಗೆ ಒಳಒಪ್ಪಂದ ಮಾಡಿಕೊಳ್ಳುವುದೇ ಕೆಲವು ಸ್ವಾರ್ಥಪರ ಹಿತಾಸಕ್ತಿಗಳ ಒಂದೇಧ್ಯೇಯ ಮತ್ತುಗುರಿಯಾಗಿದೆ.

ಸಂಗಾತಿಗಳೇ, GATWUಆಡಳಿತವರ್ಗಕ್ಕೆ ಇಲ್ಲಿಯವರೆಗೂಏನನ್ನು ಆಡಳಿತವರ್ಗಕ್ಕೆ ಕೇಳಿದೆಯೋ ಅವು ಯಾವುವೂ ಸ್ವಾರ್ಥವಲ್ಲ, ಸುಳ್ಳು ಭರವಸೆಗಳಲ್ಲ, ಕಂಪನಿಯಕೋಡ್‌ಆಫ್‌ಕಾಂಡಕ್ಟ್, ಬ್ರಾಂಡ್‌ಗಳ ಕೋಡ್‌ಆಫ್‌ಕಾಂಡಕ್ಟ್, ವಿಶ್ವಕಾರ್ಮಿಕ ಸಂಘಟನೆಯ (ILO)ಮಾನದಂಡ ಮತ್ತುಈ ದೇಶದಕಾರ್ಮಿಕ ಕಾನೂನುಗಳ ಪ್ರಕಾರವೇ ಈ ಬೇಡಿಕೆಗಳಿವೆ, ಮತ್ತು ಇವು ನ್ಯಾಯಬದ್ಧವಾಗಿವೆ.

ಪದಾಧಿಕಾರಿಗಳು

GATWU – AD Branch

Scanned with OKEN Scanner